# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 726
ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 26-12-2022
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯ ಬಾರ್ಕೂರು ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು ಈ ಪ್ರದೇಶವನ್ನು ಹಂಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ; (ವಿವರ ನೀಡುವುದು) | ಪ್ರವಾಸೋದ್ಯಮ ಇಲಾಖೆಯಿಂದ ಉಡುಪಿ ಜಿಲ್ಲೆಯಲ್ಲಿ ಬಾರ್ಕೂರು ಕೋಟೆಯನ್ನು ಪ್ರವಾಸಿ ತಾಣವಾಗಿ ಗುರುತಿಸಲಾಗಿದೆ. ಈ ಪ್ರದೇಶವನ್ನು ಹಂಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಇಲಾಖೆಯ ಮುಂದೆ ಇರುವುದಿಲ್ಲ. |
| ಆ) | ಈ ಪ್ರದೇಶದ ಉತ್ಖನನ ಹಾಗೂ ಸ್ಮಾರಕಗಳ ರಕ್ಷಣೆಗೆ ಕಳೆದ 03 ವರ್ಷಗಳಲ್ಲಿ ವೆಚ್ಚ ಮಾಡಿದ ಮೊತ್ತವೆಷ್ಟು; ಕರಾವಳಿ ಭಾಗದ ಈ ಇತಿಹಾಸ ಪ್ರಸಿದ್ಧ ಸ್ಥಳಗಳನ್ನು ಕಡೆಗಣಿಸಲು ಕಾರಣವೇನು; | ಸದರಿ ಪ್ರದೇಶವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. 2003 ರಿಂದ 2005ನೇ ಸಾಲಿನವರೆಗೆ ಬಾರ್ಕೂರಿನಲ್ಲಿ ಕೋಟೆ ಮತ್ತು ಕಂದಕ ಹಾಗೂ ಅರಮನೆ ಅವಶೇಷಗಳ ಕುರಿತಂತೆ ಭಾರತೀಯ ಪುರಾತತ್ವ ಸರ್ವೇಕ್ಷಣೆ ಮತ್ತು ಎಂ.ಹೆಚ್.ಕೃಷ್ಣ ಇನ್ಸ್ಟಿಟ್ಯೂಟ್ ಆಫ್ ಇಂಡಾಲಜಿ ಸಹಯೋಗದೊಂದಿಗೆ ಈಗಾಗಲೇ ಉತ್ಖನನವನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ.<br><br>ಈ ಪ್ರದೇಶದ ಉತ್ಖನನ ಹಾಗೂ ಸ್ಮಾರಕಗಳ ರಕ್ಷಣೆಗೆ ಕಳೆದ 03 ವರ್ಷಗಳಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣೆಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.<br><br>ಪ್ರವಾಸೋದ್ಯಮ ಇಲಾಖೆಯಿಂದ ಉಡುಪಿ ಜಿಲ್ಲೆಯ ಬಾರ್ಕೂರು ಕೋಟೆಯನ್ನು ಪ್ರವಾಸಿ ಸ್ಥಳವಾಗಿ ಗುರುತಿಸಲಾಗಿದ್ದು, ಇಲಾಖೆಯಿಂದ ಕಡೆಗಣಿಸಿರುವುದಿಲ್ಲ. ಆದರೆ, ಸದರಿ ಬಾರ್ಕೂರು ಕೋಟೆಯು ಪುರಾತನ ಅವಶೇಷಗಳಿರುವ ಸ್ಥಳವಾಗಿರುವುದರಿಂದ ಇತಿಹಾಸ ಆಸಕ್ತರನ್ನು ಹೊರತುಪಡಿಸಿ ಪ್ರವಾಸಿಗರಿಂದ ಕಡೆಗಣಿಸಲ್ಪಟ್ಟಿದೆ. |
| ಇ) | 03 ವರ್ಷಗಳ ಹಿಂದೆ ಅಳಪೋತ್ಸವ ಎಂಬ ಕಾರ್ಯಕ್ರಮದ ಮೂಲಕ ತುಳು ಅರಸರ ಸಾಧನೆಗಳು ಕೊಡುಗೆಗಳನ್ನು ಸಮಾಜಕ್ಕೆ ನೆನಪು ಮಾಡಿಕೊಳ್ಳುವ ಕಾರ್ಯಕ್ರಮಗಳನ್ನು ಸರ್ಕಾರದ ವತಿಯಿಂದ ಏರ್ಪಡಿಸಲಾಗಿದೆಯೇ; ಪ್ರಸ್ತುತ ಈ ರೀತಿಯ ಕಾರ್ಯಕ್ರಮವನ್ನು ಯಾವಾಗ ಏರ್ಪಡಿಸಲಾಗುವುದು; ಈ ಕುರಿತು ಸರ್ಕಾರದ ನಿಲುವೇನು; | 2018-19ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾಡಳಿತ ವತಿಯಿಂದ ಅಳುಪೋತ್ಸವ ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.<br><br>ಸದರಿ ಉತ್ಸವ ಆಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆರವರಿಂದ ಅನುದಾನ ಕೋರಿ ಪ್ರಸ್ತಾವನೆ ಬಂದಲ್ಲಿ, ನಿಯಮಾನುಸಾರ ಪರಿಶೀಲಿಸಲಾಗುವುದು. |

| | | |
|---|---|---|
| ಈ) | ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಬಾರ್ಕೂರು ಸಂಸ್ಥಾನ ಮತ್ತು ಅದರ ಕೊಡುಗೆಗಳೇನು;<br>ಸಂಶೋಧನಾತ್ಮಕ ವಿವರ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?(ವಿವರ ನೀಡುವುದು) | ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಉಡುಪಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಎಂಬ ವಿಷಯ ಕುರಿತಂತೆ 2008ರಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಿ, ಇಲ್ಲಿ ಪುರಾತತ್ವಜ್ಞರು ಮಂಡಿಸಲಾದ ಸಂಶೋಧನಾತ್ಮಕ ಪ್ರಬಂಧಗಳನ್ನು ಒಳಗೊಂಡ "**ಉಡುಪಿ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ**"ಎಂಬ ಪುಸ್ತಕವನ್ನು 2009ರಲ್ಲಿ ಹೊರತರಲಾಗಿದೆ.<br><br>ಇದಲ್ಲದೇ, ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಪುರಾತತ್ವ ಇಲಾಖೆಯ ವತಿಯಿಂದ ನಿರಂತರವಾಗಿ ಆಯೋಜಿಸುವ ಪ್ರಾಚ್ಯಪ್ರಜ್ಞೆ, ಪಾರಂಪರಿಕ ನಡಿಗೆ, ಪರಂಪರೆ ಕೂಟ, ವಿಶ್ವಪರಂಪರೆ ಸಪ್ತಾಹ, ಸ್ಮಾರಕಗಳ ಸ್ವಚ್ಛತೆ ಮತ್ತು ಇನ್ನಿತರೇ ಕಾರ್ಯಕ್ರಮಗಳಲ್ಲಿ ಬಾರ್ಕೂರು ಸಂಸ್ಥಾನ ಮತ್ತು ಅದರ ಕೊಡುಗೆಗಳ ವಿವರಗಳನ್ನು ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಪುರಾತತ್ವ ಅಧಿಕಾರಿಗಳು ಮತ್ತು ಇತಿಹಾಸ ತಜ್ಞರ ಮೂಲಕ ಮಾಹಿತಿಯನ್ನು ನೀಡಲಾಗುತ್ತಿದೆ. |

ಸಂಖ್ಯೆ: **TOR 342 TDV 2022**

**(ಆನಂದ್ ಸಿಂಗ್)**
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು